ದಿನಾಂಕಃ **21-02-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಿಂದ,</u>**

1) ವಾದಿ ಮತ್ತು ಅವರ ಗಂಡ ನನಗೆ ಸುಮಾರು 40 ವರ್ಷಗಳಿಂದ ಪರಿಚಯ ಇರುತ್ತಾರೆ. ಪ್ರತಿವಾದಿ ಗುರುಪ್ರಸಾದ್ ಮಾತ್ರ ಗೊತ್ತಿರುತ್ತದೆ, ಉಳಿದ ಪ್ರತಿವಾದಿಗಳು ನನಗೆ ಗೊತ್ತಿರುವುದಿಲ್ಲ. ನಾನು ಮತ್ತು ವಾದಿಯ ಗಂಡ ಬಾಲ್ಯ ಸ್ನೇಹಿತರಾಗಿರುವ ಕಾರಣ ವಾದಿ ಪರಿಚಯ ಇರುತ್ತಾರೆ. ನನಗೆ ವಾದಿ ಪರ ಸಾಕ್ಷಿ ನುಡಿಯಲು ನ್ಯಾಯಾಲಯದಿಂದ ಸಮನ್ ಬಂದಿರುವುದಿಲ್ಲ, ಆದರೆ ವಕೀಲರ ಕೋರಿಕೆಯ ಮೇರೆಗೆ ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆ. ನಾನು 10 ನೇ ತರಗತಿವರೆಗೆ ವ್ಯಾಸಂಗ ಮಾಡಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿವರಗಳು ನನಗೆ ಗೊತ್ತಿರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿರುವ ವಿವರಗಳನ್ನು ನನಗೆ ಓದಿ ತಿಳಿಸಿರುವುದಿಲ್ಲ. ಈ ದಾವೆಯನ್ನು ಯಾರು ಯಾರ ವಿರುದ್ಧ ಸಲ್ಲಿಸಿದ್ದಾರೆ ಮತ್ತು ಯಾವ ಪರಿಹಾರ ಕೋರಿ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ. ವಿಜೇಂದ್ರ ಎಂಬುವವರು ನನಗೆ ಪರಿಚಯ ಇರುತ್ತಾರೆ. ನಾನು ಅವರನ್ನು 1986 ನೇ ಸಾಲಿನಲ್ಲಿ ನೋಡಿರುತ್ತೇನೆ. ಅವರ ತಂದೆ ಹೆಸರು ಮತ್ತು ಯಾವ ಗ್ರಾಮದವರು ಎಂದು ನನಗೆ ಗೊತ್ತಿರುವುದಿಲ್ಲ.

2) ದಾವಾ ಸ್ವತ್ತು ಕಾಳೇನಹಳ್ಳಿ ಗ್ರಾಮದಲ್ಲಿ ಇರುತ್ತದೆ. ನಾನು ದಾವಾ ಸ್ವತ್ತನ್ನು ನೋಡಿರುತ್ತೇನೆ. ದಾವಾ ಸ್ವತ್ತಿನ ಚೆಕ್ಕುಬಂದಿ ನನಗೆ ಗೊತ್ತಿರುತ್ತದೆ. ನಾನು ವಾದಿಯ ಗಂಡನ ಬಾಲ್ಯ ಸ್ನೇಹಿತರಾದ ಕಾರಣ ವಾದಿ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ದಾವಾ ಸ್ವತ್ತು ಯಾರಿಗೆ ಸೇರಿತ್ತು ಮತ್ತು ಯಾರಿಂದ ಯಾರಿಗೆ ಹಕ್ಕು ಬದಲಾವಣೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ವಾದಿ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ

ಸರಿಯಲ್ಲ. ನಾನು ಪ್ರಮಾಣ ಪತ್ರದಲ್ಲಿ ವಾದಿ ಸ್ವಾಧೀನ ಇದ್ದಾರೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1, 3 ರಿಂದ 5 ನೇ ಪ್ರತಿವಾದಿ ಪರ ವಕೀಲರಿಂದ,**

ಪ್ರತಿವಾದಿ 2 ಪರ ವಕೀಲರು ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತೇನೆ ಎಂದು ಕೋರಿರುತ್ತಾರೆ. (ವಾದಿ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.) ಕಾರಣ ಪ್ರತಿವಾದಿ 2 ಪರ ವಕೀಲರು ಮಾಡಿರುವ ಪಾಟೀ ಸವಾಲನ್ನು ಪ್ರತಿವಾದಿ 1, 3 ರಿಂದ 5 ಪರವಾಗಿ ಅಳವಡಿಸಿಕೊಳ್ಳಲಾಯಿತು.

ಪ್ರತಿವಾದಿ 6 ರಿಂದ 9 ರವರು ಲಿಖಿತ ತಕರಾರು ಸಲ್ಲಿಸಿರುವುದಿಲ್ಲ ಆದ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.

ದಿನಾಂಕಃ **21-02-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಿಂದ,**

1) ನಾನು ಬಿ ಎ ಪದವಿ ವ್ಯಾಸಂಗ ಮಾಡಿರುತ್ತೇನೆ. ನನಗೆ ಆಂಗ್ಲ ಭಾಷೆಯನ್ನು ಓದಿ ಅರ್ಥ ಮಾಡಿಕೊಳ್ಳಲು ಬರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿವರಗಳು ನನಗೆ ಗೊತ್ತಿರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿರುವ ವಿವರಗಳನ್ನು ನನಗೆ ಓದಿ ತಿಳಿಸಿರುವುದಿಲ್ಲ. ನನಗೆ ವಾದಿ ಪರ ಸಾಕ್ಷಿ ನುಡಿಯಲು ನ್ಯಾಯಾಲಯದಿಂದ ಸಮನ್ ಬಂದಿರುವುದಿಲ್ಲ, ಆದರೆ ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆ. ವಾದಿ ಮತ್ತು ಅವರ ಗಂಡ ನನಗೆ ಸುಮಾರು 45 ವರ್ಷಗಳಿಂದ ಪರಿಚಯ ಇರುತ್ತಾರೆ. ನನಗೆ 1 ಮತ್ತು 2 ನೇ ಪ್ರತಿವಾದಿಗಳು ಗೊತ್ತಿರುವುದಿಲ್ಲ. ದಾವಾ ಸ್ವತ್ತು ಯಾವ ಗ್ರಾಮದಲ್ಲಿ ಇದೆ ಎಂದು ನನಗೆ ಗೊತ್ತಿರುತ್ತದೆ.

2) ದಾವಾ ಸ್ವತ್ತನ್ನು ವಾದಿ ವಿಜೇಂದ್ರ ರವರಿಂದ ಖರೀದಿ ಮಾಡಿರುತ್ತಾರೆ. ವಿಜೇಂದ್ರ ರವರು ನನಗೆ ಪರಿಚಯ ಇರುವುದಿಲ್ಲ. ವಾದಿ ನನಗೆ ಮೂರು ವರ್ಷಗಳು ಉಪನ್ಯಾಸಕಿಯಾಗಿದ್ದರು. ನಾನು ವಿಜೇಂದ್ರ ರವರನ್ನು ನೋಡಿರುವುದಿಲ್ಲ. ವಿಜೇಂದ್ರ ರವರ ವಿಳಾಸ ಮತ್ತು ಅವರ ತಂದೆ ಹೆಸರು ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತಿನ ಚೆಕ್ಕುಬಂದಿ ಮತ್ತು ಅಳತೆ ನನಗೆ ಗೊತ್ತಿರುತ್ತದೆ. ನಾನು ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿ ಎಂದೂ ಸಹ ಸ್ವಾಧೀನ ಹೊಂದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1, 3 ರಿಂದ 5 ನೇ ಪ್ರತಿವಾದಿ ಪರ ವಕೀಲರಿಂದ,**

ಪ್ರತಿವಾದಿ 2 ಪರ ವಕೀಲರು ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತೇನೆ ಎಂದು ಕೋರಿರುತ್ತಾರೆ. (ವಾದಿ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.) ಕಾರಣ ಪ್ರತಿವಾದಿ 2 ಪರ ವಕೀಲರು ಮಾಡಿರುವ ಪಾಟೀ ಸವಾಲನ್ನು ಪ್ರತಿವಾದಿ 1, 3 ರಿಂದ 5 ಪರವಾಗಿ ಅಳವಡಿಸಿಕೊಳ್ಳಲಾಯಿತು.

ಪ್ರತಿವಾದಿ 6 ರಿಂದ 9 ರವರು ಲಿಖಿತ ತಕರಾರು ಸಲ್ಲಿಸಿರುವುದಿಲ್ಲ ಆದ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.